ನಿಯಮ ೩೩ಳಿರ ಮೇರೆಗೆ

ಚಾಮರಾಜನಗರ ಕೊಳ್ಳೇಗಾಲ ರಸ್ತೆಯನ್ನು ಅಗಲ ಮಾಡಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್. – (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಕೊಳ್ಳೇಗಾಲ ರಸ್ತೆಯು ಬಹಳ ಪ್ರಮುಖವಾದ ರಸ್ತೆಯಾಗಿದ್ದು ಅಷ್ಟೆ ಅಲಕ್ಷಿಸಲ್ಪಟ್ಟ ರಸ್ತೆಯಾಗಿದೆ. ಇಲ್ಲಿ ಖಾಸಗಿ ಬಸ್ಸುಗಳು, ಸಾರಿಗೆ ಸಂಸ್ಥೆ ಬಸ್ಸುಗಳೂ ಸರಿಯಂತೆ ಸಾವಿರಾರು ವಾಹನಗಳು ದಿನವಿಡೀ ಸಂಚರಿಸುತ್ತವೆ. ರಸ್ತೆಯು ಬಹಳ ಕಿರಿದಾಗಿದ್ದು ಒಂದು ವಾಹನಪೂಕೂಡ ಸುಗಮವಾಗಿ ಸಂಚರಿಸಲು ಆಗುತ್ತಿಲ್ಲ. ಈ ಭಾಗದ ಭೂಮಿ ಕಪ್ಪು ಎರೆ ಮಣ್ಣಿನ ಭೂಮಿ ಆಗಿದ್ದು ಮಳೆ ಬಿದ್ದಲ್ಲಿ, ವಾಹನಗಳು ಟಾರಾ ರಸ್ತೆಯನ್ನು ಬಿಟ್ಟು ಕೆಳಗೆ ಇಳಿದಲ್ಲಿ ಉರುಳಿಬಿದ್ದು ಅಪಘಾತಕ್ಕೆ ಈಡಾಗಿ ಸಾವು ನೋವುಗಳು ಸಂಭವಿಸುವ ಸಂದರ್ಭ ಇದೆ. ಅಲ್ಲದೆ ಈ ರಸ್ತೆಯು ಯೆಳಂದೂರು, ಮದ್ದೂರು, ಆಗರ. ಮಾಂಬಳ್ಳಿ ಇಲ್ಲೆಲ್ಲಾ ಊರಿನ ಮಧ್ಯಭಾಗದಲ್ಲಿ ಹಾದು ಹೋಗಬೇಕಾಗಿದ್ದು, ರಸ್ತೆಯು ಇಲ್ಲಿ ಬಹಳ ಕಿರಿದಾದ ಕಾರಣ ದಿನಾ ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಈಚೆಗೆ ಮದ್ದೂರು ಬಳಿ ವಾಹನವೊಂದು ರಸ್ತೆ ಬದಿಯಲ್ಲಿ ನಿಂತಿದ್ದವರ ಮೇಲೆ ಹರಿದು ಒಬ್ಬನು ಮೃತಪಟ್ಟ ಘಟನೆ ವರದಿಯಾಗಿದೆ. ಆದಕಾರಣ ಇಲ್ಲೆಲ್ಲಾ ಬೈಪಾಸ್ ರಸ್ತೆಗಳನ್ನು ಮಾಡಬೇಕು. ಕೂಡಲೇ ಈ ರಸ್ತೆಯನ್ನು ಆದ್ಯತೆಯ ಮೇಲೆ ತೆಗೆದುಕೆಂಡು ಊರ ಹೊರಗಡೆ ಹೋಗುವಂತಹ ಬೈಪಾಸ್ ರಸ್ತೆ ಮಾಡಬೇಕು. ಎರಡು ವಾಹನಗಳು ಸುಗಮವಾಗಿ ಸಂಚರಿಸುವಂತೆ ಅಗಲ ಮಾಡುವುದು, ರಿಪೇರಿ ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ತೆಗೆದು ಕೊಳ್ಳಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು ತಾವೇ ಖುದ್ದಾಗಿ ಈ ರಸ್ತೆಗಳಲ್ಲಿ ಪ್ರವಾಸ ಮಾಡಿ ಇದರ ದುಸ್ಥಿತಿಯನ್ನು ವೀಕ್ಷಿಸಿ ಮುಂದಿನ ಕ್ರಮಕ್ಕೆ ಆಜ್ಞೆ ಮಾಡಬೇಕಾಗಿ ಕೋರುತ್ತೇನೆ

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಚಾಮರಾಜನಗರ. –ಕೊಳ್ಳೇಗಾಲ ರಸ್ತೆಯು ಸುಮಾರು ೨೫ ಕಿ.ಮೀ. ಉದ್ದವಿದ್ದು ಇದು ಜಿಲ್ಲಾ ಮುಖ್ಯರಸ್ತೆಯಾಗಿದೆ. ಈ ರಸ್ತೆಯು ಕಬಿನಿ ಬಲದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಹಾದು ಹೋಗುತ್ತದೆ. ಅಲ್ಲದೆ ಇದು ಕಪ್ಪು ಎರೆಮಣ್ಣು ಪ್ರದೇಶವಾಗಿದೆ. ಆದುದರಿಂದ ರಸ್ತೆಯು ನಾಡುದುರಸ್ಥಿಯಲ್ಲಿದೆ. ಈ ರಸ್ತೆಯನ್ನು ಸೂಕ್ತವಾಗಿ ದುರಸ್ಥಿಪಡಿಸಿ, ಅಭಿವೃದ್ಧಿ ಪಡಿಸಲು ಜಿಲ್ಲಾ ವರಿ ಅನುದಾನವನ್ನು ನಿಗದಿಪಡಿಸಿ, ಉತ್ತಮ ಸ್ಥಿತಿಯಲ್ಲಿಡಲು ಎಲ್ಲಾ ಕ್ರಮವನ್ನು ತೆಗೆದು ಕೊಳ್ಳಲಾಗುವುದು. ಯಳಂದೂರು ಮುಂತಾದ ಊರಿಗೆ ಬೈಪಾಸ್ ರಸ್ತೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

(II) ಸುಬ್ರಹ್ಮಣ್ಯನಗರ ಮತ್ತು ಗಾಯಿತ್ರಿನಗರಗಳ ನಾಗರೀಕರಿಗೆ ಹೆಚ್ಚಿನ ಬಸ್ ಸೌಕರ್ಯ

ಶ್ರೀ ಕೆ. ಲಕ್ಕಣ್ಣ. (ರಾಜಾಜಿ ನಗರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಾಬೂನು ಕಾರ್ಖಾನೆ, ಸುಬ್ರಮಣ್ಯ ನಗರ, ಗಾಯಿತ್ರಿ ನಗರಗಳ ನಾಗರೀಕರು ಜಯನಗರಕ್ಕೆ ಹೋಗಬೇಕಾದರೆ ಕೇವಲ ಎರಡು ಬಸ್ಸುಗಳು (೧೭೮) ಮತ್ತು (೨೬೨ಸಿ) ಮಾತ್ರ ಇದ್ದು ಇವು ಸುಬ್ರಹ್ಮಣ್ಯ ನಗರದ ಮೂಲಕ ಹಾದುಹೋಗುವ ಸಮಯ ಈ ಕೆಳಕಂಡಂತಿದೆ. ರೂಟ್ ನಂ. (೨೬೨ಸಿ) ಪೀಣ್ಯ ೨ನೇ ಹಂತದಿಂದ ಜಯನಗರಕ್ಕೆ

ಪ್ರತಿ ೨ ಗಂಟೆಗೆ ಒಂದು ಸಾರಿಯಂತೆ ಬೆಳಿಗ್ಗೆಯಿಂದ: ೮.೫೫, ೧೦.೪೫, ೧.೪೫, ೨.೩೦, ೪.೩೫, ಇತ್ಯಾದಿ ಗಂಟೆಗಳಿಗೆ ರೂಟ್ ನಂ. (೧೭೮) ಕರ್ನಾಟಕ ಸಾಬೂನು ಕಾರ್ಖಾನೆಯಿಂದ ಜಯನಗರಕ್ಕೆ ಒಂದೂಕಾಲು ಗಂಟೆಗೆ ಒಮ್ಮೆ

ಬೆಳಿಗ್ಗೆಯಿಂದ: ೬.೪೫, ೭.೫೫, ೯.೧೦- ೧೦.೧೫, ೧೧.೫೦, ಇತ್ಯಾದಿ ಗಂಟೆಗಳಿಗೆ

ಆದರೆ ಮೇಲ್ಕಂಡ ೭ ಬಡಾವಣೆಗಳಿಂದ ತುರ್ತಾಗಿ ವಿಧಾನಸೌಧ, ಕೃ.ರಾ. ಮಾರ್ಕೆಟ್ ಗಾಂಧಿಬಜಾರ್, ಮುಂತಾದ ಕಡೆಗಳಿಗೆ ಹೋಗುವಂತಹ ನೌಕರರು, ಕಾರ್ಮಿಕರು, ವ್ಯಾಪಾರಿಗಳು ವಿದ್ಯಾರ್ಥಿಗಳು, ಪ್ರತಿದಿನ ಅನಿವಾರ್ಯವಾಗಿ ಮಲ್ಲೇಶ್ವರಂ ಸರ್ಕಲ್‌ಗೆ ಬಂದು ಅಲ್ಲಿಂದ ಬೇರೆ ಬಸ್ಸನ್ನು ಹಿಡಿಯಲೇಬೇಕಾಗಿದೆ. ಇದರಲ್ಲಿ ಒಂದು ಟ್ರಿಪ್ ತಪ್ಪಿದರೂ ಗಂಟೆಗಟ್ಟಲೆ ಕಾಯಬೇಕು. ಇದರಿಂದ ಕಾಲಹರಣ ಮಾತ್ರವಲ್ಲ ಬಸ್ ಚಾರ್ಜ್ ಕೂಡ ಎರಡು ಪಟ್ಟು ತೆರಬೇಕಾಗಿದೆ. ಆದ್ದರಿಂದ ಜಯನಗರಕ್ಕೆ ಈಗ ಓಡಿಸುತ್ತಿರುವ ಬಸ್‌ಗಳ ಜೊತೆಗೆ ಇನ್ನೂ ೨ ಬಸ್‌ಗಳನ್ನು ಹೆಚ್ಚಿಗೆ ಓಡಿಸಿ ಈ ಬಡಾವಣೆಗಳ ನಾಗರೀಕರಿಗೆ ಅನುಕೂಲ ಮಾಡಿಕೊಡುವಂತೆ ಮಾನ್ಯ ಸಾರಿಗೆ ಸಚಿವರಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಾರಿಗೆ ಮಂತ್ರಿಗಳ ಗಮನಕ್ಕೆ ತಂದು ಸರ್ಕಾರದಿಂದ ಅವರಿಗೆ ಉತ್ತರವನ್ನು ಒದಗಿಸಲಾಗುವುದು.

(iii) ಜನಾರೋಗ್ಯ ಶಿಲ್ಪ ಕಾರ್ಯಾಪಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ

ಶ್ರೀ ಶ್ರೀರಂಗದೇವರಾಯಲು.—ಅಧ್ಯಕ್ಷರೆ, ಜನಾರೋಗ್ಯ ಶಿಲ್ಪಕಾರ್ಯಾಪಲಯಕ್ಕೆ ಪ್ರತ್ಯೇಕ ವಾದಂಥ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದೆ ಇರುವುದರಿಂದ ಕೊಳವೆ ಬಾವಿ ಕೊರೆಯುವ ಇಲಾಖೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ಸಾಕಷ್ಟು ನೌಕರರು ಒಂದೇ ಹುದ್ದೆಯಲ್ಲಿ ೩೫-೩೪ ವರ್ಷ ಇಲಾಖೆಯಲ್ಲಿ ಕೆಲಸ ಮಾಡಿ ಅದೇ ಹುದ್ದೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ನಿವೃತ್ತಿ ಹೊಂದಿದ್ದಾರೆ. ಈ ಹಿಂದೆ ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಕೊಟ್ಟಿದ್ದು ಸರ್ಕಾರ ಆದಷ್ಟು ಬೇಗ ಜನಾರೋಗ್ಯ ಶಿಲ್ಪ ಕಾರ್ಯಾಪಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದು ಈವರೆಗೂ ಸಹ ಇದನ್ನು ರಚಿಸಿಲ್ಲ. ಆದಷ್ಟು ಬೇಗ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕೆಂದು ಸರ್ಕಾರವನ್ನು ವಿನಂತಿಸಿ, ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿಕೆ ನೀಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ತಡ ಆಗಿದ್ದು ನಿಜ. ಆದರೆ ಈ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಜೋನ್ ಇದು ಅಸ್ತಿತ್ವಕ್ಕೆ ಬಂದಿದ್ದು ೧೯೮೧ರಲ್ಲಿ ಅದಕ್ಕೆ ಮುಂಚೆ ಮೈನರ್ ಇರಿಗೇಷನ್ ಅಂಡ್ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ನಾರ್ತ್ ಅಂಡ್ ಸೌತ್ ಎಂದು ಇತ್ತು. ಅದು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿತ್ತು. ೧೯೮೧-೧೯೮೧ರಲ್ಲಿ ಅದು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಭಾಗವನ್ನು ರೂರಲ್ ಡೆವಲಪ್‌ಮೆಂಟ್‌ಗೆ ಇಲಾಖೆಗೆ ಸೇರಿಸಿದರು. ಆಮೇಲೆ ಅದು ಒಂದು ಡ್ರಾಫ್ಟ್ ಕೇರರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕಾಗಿತ್ತು. ಅದು ಆಗಿಲ್ಲ ಆದರೆ ಅದು ಈಗ ಡಿಪಾರ್ಟ್‌ಮೆಂಟ್ ಆಫ್ ಪರ್ಸನಲ್ ಅಡ್ಮಿನಿಸ್ಟ್ರೇಟೀವ್ ರಿಫಾರಮ್ಸ್ ಅವರ ಶೀರ್ಷಿಕೆಯಲ್ಲಿದೆ. ಅದು ಪರಿಶೀಲನೆ ಆದಮೇಲೆ ಆ ರೂಲ್ಸ್‌ಗೆ ಸರ್ಕಾರ ಅನುಮತಿ ಕೊಡಲಿಕ್ಕೆ ಸಾಧ್ಯವಾಗುತ್ತದೆ.

(iV) ಬೆಂಗಳೂರಿನ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ವಾಣಿಜ್ಯ ಕಾನೂನು ಭೋಧನೆ

DR|| R. B CHOUDHARI.—A full time employee working in Karnataka Gazetteer has been given assiganment of teaching Commercial Law for Second Year Commercial Practice Course in Government polytechnic for Women Banglore for academic year 1989-90, when there is no scarcity of Advocates both men and women in Bangalore, what are the compreling circumstances and extraordinary reasons to accommodate the full-time Government servants in teaching of Commercial Law in Govt., Polythechnic for women, Bangalore ?

The teaching of law by a practising Advocate will be meaningful and purposeful in the interest of students, and if taught by a